## ತಿಪಟೂರಿನಲ್ಲಿ ಬಸ್ಸು ನಿಲ್ದಾಣ ನಿರ್ಮಿಸುವ ಬಗ್ಗೆ

೩೬(೧೬೮) ಶ್ರೀ ಎಸ್ ಪಿ. ಗಂಗಾಧರಪ್ಪ (ತಿಪಟೂರು).—ಮಾನ್ಯ ಸಾರಿಗೆ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ತಿಪಟೂರಿನಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಅಲ್ಲಿನ ಪುರಸಭೆಯವರು ೩ ಎಕರೆ ಜಮೀನನ್ನು ಮಂಜೂರ್ಮಾಡಿದ್ದು ಸದರಿ ನಿಲ್ದಾಣವನ್ನು ನಿರ್ಮಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಕೈಗೊಂಡ ಕ್ರಮವೇನು ?

ಶ್ರೀ ಎಂ. ಪಿ ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—
ಭೂ ಸ್ವಾಧೀನಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ನಂತರ ಬಸ್ ನಿಲ್ದಾಣದ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು.

ಶ್ರೀ ಎಸ್. ಪಿ. ಗಂಗಾಧರಪ್ಪ —ಅಧ್ಯಕ್ಷರೇ, ಈ ನಿಲ್ದಾಣದ ಬಗ್ಗೆ ಎಸ್ಟಿಮೇಟ್ ಹಾಗೂ ಪ್ಲಾನ್ ಆಗಿದೆಯೇ ? ಸ್ಪಾಟ್ ಇನ್ಸ್‌ಪೆಕ್ಷನ್ ಆಗಿದೆಯೇ ? ಇಲ್ಲಿ ದಿನಂ ಪ್ರತಿ ೩೦೦ ರಿಂದ ೩೫೦ ಬಸ್‌ಗಳು ಓಡಾಡುತ್ತಿದ್ದು ಇದನ್ನು ಶೀಘ್ರವಾಗಿ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಪಿ ಪ್ರಕಾಶ್ —ಮಾನ್ಯ ಸದಸ್ಯರು ಏನು ಒಂದು ನಿವೇಶನವನ್ನು ತಿಳಿಸಿದ್ದಾರೆ ಆ ಭೂವಿಂ ಒಂದು ಎಕರೆಗೆ ೫೦ ಸಾವಿರ ರೂಪಾಯಿಯಾಗಲಿದ್ದು ಒಟ್ಟು ೩ ಎಕರೆಗೆ ೧,೫೦,೦೦೦ ರೂಪಾಯಿಗಳಾಗುತ್ತದೆ. ಈ ಜಾಗ ಕೆರೆಯ ಜಾಗವಾಗಿರುವುದರಿಂದ ಅದನ್ನು ಲೆವೆಲ್ ಮಾಡಿಸುವುದಕ್ಕೆ ೩ ಲಕ್ಷ ರೂಪಾಯಿ ಖರ್ಚಾಗುತ್ತದೆ. ಈ ಎಲ್ಲಾ ಕಾರಣ ಹಾಗೂ ಸಂಪನ್ಮೂಲ ಹೊಡಿಸುವುದರಲ್ಲಿ ಕಷ್ಟವಿರುವುದರಿಂದ ಆದ್ಯತೆ ಮೇರೆಗೆ ಕಾರ್ಯಕ್ರಮ ಹಾಕಿಕೊಳ್ಳಲಾಗುತ್ತದೆ. ಈ ಕೂಡಲೇ ಮಾಡವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗೂ ಈ ಭೂವಿಂಯಂ ಬೆಲೆ ಎಕರೆಗೆ ೫೦ ಸಾವಿರ ರೂಪಾಯಿಯಾಗಿದ್ದು ಇದು ಜಾಸ್ತಿಯಾದ್ದರಿಂದ ಅದನ್ನು ಕಡಿಮೆ ಬೆಲೆಗೆ ಕೊಡಿಸುವ ಬಗ್ಗೆ ಮಾನ್ಯ ಶಾಸಕರು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

## ತುರುವೇಕೆರೆಯಲ್ಲಿ ಮುನ್ಸಿಫ್ ಮತ್ತು ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಫಸ್ಟ್ ಕ್ಲಾಸ್ ಕೋರ್ಟ್ ಸ್ಥಾಪನೆ ಬಗ್ಗೆ.

೩೭ (೬೭) ಶ್ರೀ ಬಿ. ಬೈರಪ್ಪಜಿ (ತುರುವೆಕೆರೆ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಈಗಾಗಲೇ ತುರುವೇಕೆರೆ ಟೌನ್‌ನಲ್ಲಿ ಮುನ್ಸೀಫ್ ನ್ಯಾಯಾಲಯವೊಂದನ್ನು ಪ್ರಾರಂಭಿಸಲು ಮುಂಜಾಣ ಮಂಜೂರಾತಿ ದೊರೆತಿರುವುದು ನಿಜವಲ್ಲವೆ.

ಆ) ಹಾಗಿದ್ದಲ್ಲಿ ೧೯೮೪-೮೫ನೇ ಸಾಲಿನಿಂದಲೇ ಸದರೀ ನ್ಯಾಯಲಯವನ್ನು ಪ್ರಾರಂಭಿಸಲು ಸರ್ಕಾರ ಸೂಕ್ತ ಏರ್ಪಾಡು ಮಾಡುವುದೆ ?

ಶ್ರೀ ಎ. ಲಕ್ಷ್ಮಿಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮತ್ತು ಸಾರ್ವಜನಿಕ ಕುಂದು ಕೊರತೆಗಳ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ. ಬೈರಪ್ಪಜಿ.—ಅಧ್ಯಕ್ಷರೇ, ೩ ವರ್ಷದ ಕೆಳಗೆ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ತುರುವೇಕೆರೆಗೆ ಬಂದು ಸ್ಥಳ ಪರಿಶೀಲನೆ ಮಾಡಿ ಇಲ್ಲಿ ಕೋರ್ಟಿನ ಅವಶ್ಯಕತೆ ಇದೆ ಕಟ್ಟಡವನ್ನು ಕೊಡಿ, ಕೋರ್ಟ್ ಪ್ರಾರಂಭ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರು. ಈ ಒಂದು ವಿಷಯದ ಬಗ್ಗೆ ಸರ್ಕಾರಕ್ಕೆ ಹೈಕೋರ್ಟಿನಿಂದ ಏನಾದರೂ ನಿರ್ದೇಶನ ಬಂದಿದೆಯೇ? ಬಂದಿದ್ದರೆ ಆ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ? ತಾವೂ ಕೂಡಾ ಈ ತಾಲ್ಲೂಕಿಗೆ ಕೋರ್ಟ್ ಅವಶ್ಯಕ ಎಂಬುದನ್ನು ಕಂಡು ಕೂಡಲೇ ಅಲ್ಲಿ ಕೋರ್ಟ್ ಪ್ರಾರಂಭ ಮಾಡಬೇಕೆಂದು ಹೈಕೋರ್ಟಿಗೆ ತಿಳಿಸುತ್ತೀರಾ?